ಶ್ರೀ ಎಸ್. ಬಂಗಾರಪ್ಪ.— ಮಾನ್ಯ ಮುಖ್ಯ ಮಂತ್ರಿಗಳು ಹೇಳಿರುವುದನ್ನು ಕೇಳಿ ನಮಗೆ ಸಮಾಧಾನವಾಗುತ್ತದೆ. ಆದರೆ ನಮಗೆ ಅಲ್ಲಿಯ ನೌಕರರು ಪತ್ರಗಳನ್ನು ಕಳುಹಿಸಿರುವ ಪ್ರಕಾರ, ಮಲೆಯಾಳಿ ಅಧಿಕಾರಿ.....

SRI D. DEVARAJ URS.— Madam Speaker, I request the hon. Members not to rake up the question again and again and enter into a discussion on it which may lead to something else. I appeal to the hon. Members.

Alleged illtreatment to a Marchant in Tiptor

ಶ್ರೀ ಎಚ್. ಎಸ್ ಸಿದ್ದಪ್ಪ.— ಮೊನ್ನೆ ದಿನಸಿ ತಿಪಟೂರು ವರ್ತಕರ ಮೇಲೆ ತಹಸೀಲ್ದಾರರು ಮತ್ತು ಪೋಲೀಸರು, ರೂರಲ್ ಡಿಬೆಂಚರ್ ಎತ್ತುವುದಕ್ಕೆ ಹೋದಾಗ ಕೊಡಲಿಲ್ಲವೆಂದು .....

ಶ್ರೀ ಡಿ. ದೇವರಾಜ ಅರಸ್.—ಮಾನ್ಯಸದಸ್ಯರು ಬರೆದು ಕಳುಹಿಸಿದ್ದಾರೆ. I have immedately askd the IGP to enquire into it

SRI H. S. SIDDAPPA. — Then it is alright.

CLOSURE OF SHOPS IN BASAVANAGUDI

ಶ್ರೀ ಎಂ. ಎಸ್. ಕೃಷ್ಣನ್.— ಈಗ ತಾನೇ ಬಸವನಗುಡಿಯ ವರ್ತಕರು ಬಂದಿದ್ದರು.

ಅಧ್ಯಕ್ಷರು.— ಈ ವಿಷಯ ಮುಗಿಯಿತು, ತಾವು ಸಭೆಯಲ್ಲಿ ಇರಲಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.— ನಾನು ಈಗ ತಾನೇ ಅವರನ್ನೆಲ್ಲ ನೋಡಿ ಅವರ ಜೊತೆಯಲ್ಲಿ ಮಾತನಾಡಿ ಬಂದೆ. I would like to impress upon the Chief Minister that as far as the people of Bangalore are concerned they are disgusted. The police Commissioner is behaving in a very rough manner even with MLAS. Even though the matter might have been raised by hon. Member Sri Shamanna and the Chief Minister replied to it. I thought it my is duty to say about it. ನಾವು ಏನಾದರೂ ಕೇಳುವುದಕ್ಕೆ ಹೋದರೆ ನೀವು ಯಾರು ಕೇಳುವುದಕ್ಕೆ, ನೀವು ಗೂಂಡಾಗಳು ಎಂದು ಹೀಗೆಲ್ಲ ಮಾತನಾಡುತ್ತಾರೆ. ಎಲ್ಲರೂ ಗೂಂಡಾಗಳು, ಎಲ್ಲರೂ ಪೋಲಿಗಳು ಎಂದರೆ ಕಷ್ಟವಾಗುತ್ತದೆ.

ಅಧ್ಯಕ್ಷರು.— ಮಾನ್ಯ ಸದಸ್ಯರು ಸಭೆಯಲ್ಲಿ ಇರಲಿಲ್ಲ. ಈಗ ಪುನಃ ಸ್ಟೇಟ್‌ಮೆಂಟ್ ಮಾಡುವುದ ಕ್ಕಾಗುತ್ತದೆಯೇ?

Supply of Reports of the Khadi and village Industries Board

ಶ್ರೀ ಕಾಗೋಡು ತಿಮ್ಮಪ್ಪ — ಖಾದಿ ಬೋರ್ಡಿನ ಆಡಿಟೆಡ್ ರಿಪೋರ್ಟ್ ನಮಗೆ ಒದಗಿಸಿದ್ದಾರೆ. ಆದು ೧೯೬೮-೬೯ನೇ ಸಾಲಿಗೆ ಸಂಬಂಧಪಟ್ಟದ್ದು. ಈಚಿನ ರಿಪೋರ್ಟುಗಳನ್ನು ನಮಗೆ ಒದಗಿಸುವ ವ್ಯವಸ್ಥೆ ಮಾಡಬೇಕು. ಖಾದಿ ಬೋರ್ಡಿನ ಬಗ್ಗೆ ಸಾಕಾದಷ್ಟು ಆಪಾದನೆಗಳು ಇವೆ. ಅಧ್ಯಕ್ಷರೇ ನಿನ್ನೆ ಖಾದಿ ಬೋರ್ಡಿನ ೧೯೬೯ನೇ ಇಸವಿಯ ರಿಪೋರ್ಟನ್ನು ನಮಗೆ ಕೊಟ್ಟಿದ್ದರಿಂದ ಈ ವಿಚಾರ ಹೇಳ ಬೇಕಾಯಿತು.

ಶ್ರೀ ವಾಟಾಳ್ ನಾಗರಾಜ್.— ನಾವು ಈಗ ೧೯೭೩ನೇ ಇಸವಿಯಲ್ಲಿದ್ದೇವೆ. ೧೯೬೯ನೇ ಇಸವಿಯ ರಿಪೋರ್ಟು ಕೊಟ್ಟರೆ ಹೇಗೆ?

ಶ್ರೀ ಕಾಗೋಡು ತಿಮ್ಮಪ್ಪ.—ಇತ್ತೀಚೆಗಿನ ಆಡಿಟ್ ರಿಪೋರ್ಟು ಬಂದರೆ ನಮಗೆ ಸಹಾಯಕ ವಾಗುತ್ತದೆ.